ಕಾನ್ಸ್‌ಟೇಬಲರ್ ಬೈಕ್‌ನಿಂದ ಇಳಿದು ಆಲೆಮನೆಯತ್ತ ಇಣುಕು ನೋಟ ಹಾಕಿದ.

'ಸಾರ್, ಆಲೆ ಮನೆ...' ಪಿಸಿಯ ಕುತೂಹಲದ ಪದಗಳು!

ಇನ್ಸ್‌ಪೆಕ್ಟರ್ ಅಚ್ಚರಿಯಿಲ್ಲವೆನ್ನುವಂತೆ ಅವನ ಮಾತನ್ನು ತಳ್ಳಿ ಹಾಕಿದ.

'ನಾನು ಇಲ್ಲಿಗೆ ಬರ್ತಾ ಇರೋದು ಇದು ಹತ್ತನೆಯ ಬಾರಿ. ಬರೀ ಆಲೆಮನೆ ನೋಡಿದ್ದಲ್ಲ. ಇಲ್ಲಿ ತಯಾರಿಸೋ ಬಿಸಿಬಿಸಿ ಬೆಲ್ಲನೂ ತಿಂದಿದ್ದೇನೆ. ಸ್ವಲ್ಪ ಬಾಯ್ಮುಚ್ಚೊಂಡು ನನ್ನ ಜೊತೆಗೆ ಬಾ. ತನಿಖೆ ಮಾಡೋವಾಗ ಮಾತು ಹೆಚ್ಚಾಗಿರ್ಬಾರ್ದು' ಅಧಿಕಾರಿಯ ಮಾತು ಗಂಭೀರವಾಗಿತ್ತು.

ಅಧಿಕಾರಿ ತನಿಖೆಯ ಬಗ್ಗೆ ಹೆಚ್ಚೇನು ವಿಷಯಗಳನ್ನು ಗೌಪ್ಯವಾಗಿಡದೆ ಪಿಸಿಗೆ ಎಲ್ಲವನ್ನೂ ಹೇಳಿದ್ದ. ಬಹಳಷ್ಟು ವಿಷಯಗಳನ್ನು ಸಂಗ್ರಹಿಸಿದ್ದ ಪಿಸಿಯ ಮೇಲೆ ಅಧಿಕಾರಿಗೂ ಅಭಿಮಾನವಿದ್ದರೂ ತನ್ನಿಂದಾಗದ ಕೆಲವೊಂದು ಮಾಹಿತಿಗಳನ್ನು ಕಲೆ ಹಾಕಿರುವ ಅವನ ಮೇಲೆ ಸದಾ ಅನುಮಾನದ ಎಳೆಯೊಂದು ತುಂಬಿಕೊಂಡಿತ್ತು.

ಲಹರಿಯ ಕೇಸು ಕೈಗೆತ್ತಿಕೊಂಡ ಮೇಲೆ ಒಂದಲ್ಲ ಒಂದು ಕಾರಣಕ್ಕೆ ತನಿಖೆಗೆ ಅಡ್ಡಿಯಾಗುತ್ತಲೇ ಇತ್ತು. ಆ ಅಡ್ಡಿಗೆ ಕಾರಣವೇನು? ಕಾರಣ ಯಾರು? ಅನ್ನುವ ನಿಗೂಢ ಪ್ರಶ್ನೆಯೊಂದು ಎದುರಾಗಿತ್ತು. ಅದಕ್ಕಾಗಿಯೇ ಹನ್ನೊಂದನೆ ಬಾರಿ ಭುಜಂಗೇಶರಾಯರ ಫಾರ್ಮ್ ಹೌಸ್ ನೋಡುವ ನೆಪ ಹಿಡಿದು ಬಂದಿದ್ದ. ಸಾರಂಗ ಬಾಯಿಗೆ ಬೀಗ ಜಡಿದವರಂತೆ ನಡೆಯುತ್ತಿದ್ದರೂ ಮನದಲ್ಲೆದ್ದ ನೂರಾರು ಪ್ರಶ್ನೆಗಳನ್ನು ಕಂಪ್ಯೂಟರ್ ಪೆನ್ ಡ್ರೈವ್ ಮೆಮೋರಿಗೆ ಇಳಿಸುವಂತೆ ಮೆದುಳಿನಿಂದ ನೋಟ್ ಬುಕ್‌ನ ಮೇಲೆ ಇಳಿಸುತ್ತಿದ್ದ ಇನ್ಸ್‌ಪೆಕ್ಟರ್‌ಗೆ ಕಾಣದಂತೆ.

ಪಿಸಿ ಸಾರಂಗ ಆಲೆಮನೆಯ ಮುಂದಿನ ಕಾಲುದಾರಿಯನ್ನು ದಾಟಿ ಸಣ್ಣ ತೊರೆಯನ್ನು ದಾಟಿ ಫಾರ್ಮ್ ಹೌಸ್‌ನ ಕಡೆಗೆ ನಡೆದ. ಇನ್ಸ್‌ಪೆಕ್ಟರ್ ಗಂಭೀರ ನಡಿಗೆಯಲ್ಲಿಯೇ ಅವನ ಹಿಂದಿನಿಂದ ಬಂದು ಕಣ್ಣುಗಳಲ್ಲಿಯೇ ಸ್ಥಳದ ಮಹಜರು ನಡೆಸುತ್ತಿದ್ದ. ಸಾರಂಗನ ಕಣ್ಣುಗಳ ನೋಟವೂ ಸೂಕ್ಷ್ಮವಾಗಿ ಅಲ್ಲೆಲ್ಲಾ ಹೊರಳಾಡುತ್ತಿತ್ತು.

ಫಾರ್ಮ್ ಹೌಸ್‌ನ ಬಾಗಿಲಿಗೆ ದಪ್ಪನೆಯ ಬೀಗ ಜಡಿಯಲಾಗಿತ್ತು. ಸುತ್ತಲೂ ಮುಳ್ಳಿನ ಪೊದೆಗಳು ಬೆಳೆದಿದ್ದವು. ಪಿಸಿ ಆ ಮುಳ್ಳಿನ ಪೊದೆಗಳ ಒಳಗೂ ಇಣುಕು ಹಾಕಿ ಸ್ಥಳ ಪರಿಶೀಲನೆ ನಡೆಸಿದ. ಫಾರ್ಮ್ ಹೌಸ್‌ನ ಮಾಲೀಕನ ಅನುಮತಿಯೊಂದಿಗೆ ಬರುತ್ತಿದ್ದರೆ ಒಳಗೇನಿದೆಯೆಂದು ನೋಡಬಹುದಿತ್ತು. ಇದು ಪಿಸಿಯ ಕಲ್ಪನೆ.

ಅಧಿಕಾರಿ ತನಿಖೆಯನ್ನು ಗೌಪ್ಯವಾಗಿ ನಡೆಸುತ್ತಿರಬಹುದು. ಪಿಸಿಯ ತಲೆಯೆಲ್ಲಾ ಖಾಲಿಯಾಗಿತ್ತು. ಫಾರ್ಮ್ ಹೌಸ್‌ನ ಭೇಟಿ ಬೋರ್ ಹೊಡೆಸಿತು. ಅಧಿಕಾರಿ ಬೇರೆ ಮಾತನಾಡದಂತೆ ಕಟ್ಟಪ್ಪಣೆಯನ್ನು ವಿಧಿಸಿದ್ದ. ಅಸಹನೆಯ ಮೌನ ತಲೆಯನ್ನು ಕೆಲಸ ಮಾಡದಂತೆ ಜಡವಾಗಿಟ್ಟಿತ್ತು.

ಇನ್ಸ್‌ಪೆಕ್ಟರ್ ರಾಜಧಾನಿ ಮುಳ್ಳಿನ ಪೊದೆಯನ್ನು ದಾಟಿ ಫಾರ್ಮ್ ಹೌಸ್‌ಗೆ ಒಂದು ಸುತ್ತು ಹಾಕಿದ. ಹೌಸ್‌ನ ಎದುರು ಭಾಗದಲ್ಲಿ ಒಣ ಬತ್ತದ ಹುಲ್ಲನ್ನು ಎತ್ತರವಾಗಿ ಪೇರಿಸಿಡಲಾಗಿತ್ತು. ಇನ್ನೊಂದೆಡೆ ಕಬ್ಬಿನ ಜೊಂಡಿನ ರಾಶಿಯು ಬಿದ್ದಿತ್ತು. ಆಲೆಮನೆಯ ಕೊಪ್ಪರಿಗೆಗಳೆರಡು ಬಣ್ಣ ಕಳೆದು ತುಕ್ಕು ಹಿಡಿದು ಬೋರಲಾಗಿ ಬಿದ್ದಿದ್ದವು.

ಫಾರ್ಮ್ ಹೌಸ್‌ಗೆ ಒಂದು ಸುತ್ತು ಹಾಕಿದರೂ ಇನ್ಸ್‌ಪೆಕ್ಟರ್ ರಾಜಧಾನಿಗೆ ಏನೂ ವಿಶೇಷ ಕಾಣಿಸಲಿಲ್ಲ. ಬಂದ ದಾರಿಗೆ ಸುಂಕವಿಲ್ಲದಂತೆ ಹಿಂದಕ್ಕೆ ನಡೆಯಲು ನಿರ್ಧರಿಸಿದ. ಪಿಸಿ ಆಜ್ಞಾನುವರ್ತಿಯಂತೆ ಅಧಿಕಾರಿಯ ಬಲ ಹಿಡಿದು ನಡೆಯುತ್ತಿದ್ದ. ತಕ್ಷಣವೇ ಇನ್ಸ್‌ಪೆಕ್ಟರ್ ಏನೋ ಸುಳಿವು ದೊರೆತಂತೆ ಕೈಯನ್ನು ಹಿಂದಕ್ಕೆ ಅರಳಿಸಿ ಪಿಸಿಯನ್ನು ಹೆಜ್ಜೆ ಹಾಕದಂತೆ ತಡೆದ. ಪಿಸಿಯ ಮೆದುಳು ಚುರುಕಾಯಿತು. ಕಿವಿ ನಿಮಿರಿತು. ತನಗೆ ಕೇಳಿಸದ ಯಾವುದೇ ಸದ್ದು ಅಧಿಕಾರಿಯ ಕಿವಿಗೆ ಬಿದ್ದಿದೆ! ಏನದು?

ಕಬ್ಬಿನ ಗದ್ದೆಯ ಬದಿಯಿಂದ ಸುಯ್ಯನೆ ಬೀಸುವ ಗಾಳಿ ತೇಲಿ ಬರುವ ಸದ್ದು ಬಿಟ್ಟರೆ ಮತ್ಯಾವುದೇ ಸದ್ದು ಕೇಳಿಸುತ್ತಿರಲಿಲ್ಲ. ಕಣ್ಣಿಗೇನಾದರೂ ಗೋಚರಿಸುವುದೇ ಎಂದು ಸುತ್ತಲೂ ದೃಷ್ಟಿಸಿದ. ಅಧಿಕಾರಿಗೆ ಕೇಳಿದ ಸದ್ದು ಯಾವುದು? ಏನೂ ತಿಳಿಯದವರಂತೆ ಅಧಿಕಾರಿಯ ಮುಖ ನೋಡಿದ.

ಕಬ್ಬಿನ ಗದ್ದೆಗಳ ಬಳಿಯಿತ್ತು ಅಧಿಕಾರಿಯ ನೋಟ. ಪಿಸಿ ಅತ್ತ ನೋಡಿದ. ಕಬ್ಬಿನ ತೆನೆಯ ಸಾಲುಗಳು ಒಂದೇ ನೇರದಲ್ಲಿ ಮೆಲ್ಲಗೆ ಅಲುಗಾಡುತ್ತಿದ್ದವು.



## ಇಲ್ಲಿಯವರೆಗೆ

ಭುಜಂಗರಾಯರ ಮಗಳು ಮೇನಕಾ ಬರ್ತ್‌ಡೇ ಪಾರ್ಟಿ ಜೋರಾಗಿ ನಡೆಯುತ್ತಿರುತ್ತದೆ. ಮೇನಕಾ ಪ್ರೀತಿಸುತ್ತಿದ್ದ ಕಿರಣನನ್ನು ಪಾರ್ಟಿಗೆ ಆಹ್ವಾನಿಸಿದ್ದಳು. ಆದರೆ ಭುಜಂಗರಾಯರಿಗೆ ಕಿರಣನನ್ನು ಕಂಡರಾಗದು. ಲಹರಿ ಕಣ್ಮರೆಯಾದ ವಿಷಯವನ್ನು ರಾಯರು ಕೇಳಿದರೆ ಏನನ್ನೂ ಉತ್ತರಿಸಬೇಡ ಎಂದು ಕಿರಣನಿಗೆ ಮೇನಕಾ ಮೊದಲೇ ಸೂಚನೆ ಕೊಟ್ಟಿದ್ದಳು. ಕಾಶಮ್ಮನವರೂ ಲಹರಿಯ ಬಗ್ಗೆಯೇ ಚಿಂತಿತರಾಗಿದ್ದರು. ಲಹರಿಯ ಅನುಪಸ್ಥಿತಿಯಲ್ಲಿಯೇ ಮೇನಕಾಳ ಬರ್ತ್‌ಡೇ ಅದ್ದೂರಿಯಾಗಿಯೇ ನಡೆಯಿತು.

ಅಂದರೆ ಅಲ್ಲಿ ಯಾರೋ ಹಾದು ಹೋಗುತ್ತಿದ್ದಾರೆ!

ಅಧಿಕಾರಿ ಮರದ ಹಿಂದಕ್ಕೆ ನಿಂತ ಪಿಸಿಯ ಜೊತೆಗೆ. ಸ್ವಲ್ಪ ಹೊತ್ತಿನಲ್ಲಿಯೇ ಒಂದು ಹೆಣ್ಣು ಇನ್ನೊಂದು ಗಂಡಸು ಕಬ್ಬಿನ ತೋಟದಿಂದ ಮೇಲೇರಿ ಫಾರ್ಮ್ ಹೌಸ್‌ನ ದಾರಿ ಹಿಡಿದದ್ದು ಕಂಡಿತು. ಇನ್ಸ್‌ಪೆಕ್ಟರ್ ರಾಜಧಾನಿಯ ತಲೆ ಚುರುಕಾಯಿತು.

ಹೆಣ್ಣು ಶ್ರೀಮಂತೆ!

ಗಂಡಸು ಮನೆ ಕೆಲಸದಾಳು!

ಕುತೂಹಲ ಮೂಡಿತು. ಇಣುಕು ನೋಟ ಅವರಿಬ್ಬರೂ ಫಾರ್ಮ್ ಹೌಸ್‌ಗೆ ತಲುಪುವವರೆಗೂ ಇತ್ತು.

'ಬಂದಿದ್ದು ಸಾರ್ಥಕವಾಯಿತು' ಯಾವುದೋ ಕುರುಹು ದೊರಕಿತೆನ್ನುವ ಸಮಾಧಾನದಿಂದ ಇನ್ಸ್‌ಪೆಕ್ಟರ್‌ನನ್ನು ಕೆದಕಿದ ಪಿಸಿ ಸಾರಂಗ.

'ಇನ್ನು ಸ್ವಲ್ಪ ಹೊತ್ತು ನಿನ್ನ ಬಾಯಿಗೆ ಪ್ಲಾಸ್ಟರ್ ಹಾಕಿಕೊಳ್ಳೋದು ಒಳ್ಳೆಯದು' ಪರೋಕ್ಷವಾಗಿ ಸುಮ್ಮನಿರುವಂತೆ ವ್ಯಂಗ್ಯದ ಮಾತುಗಳನ್ನಾಡಿದ ಇನ್ಸ್‌ಪೆಕ್ಟರ್ ಮರೆಯಿಂದ ಹೊರಗೆ ಬಂದು ಏನೂ ತಿಳಿಯದವರಂತೆ ಫಾರ್ಮ್ ಹೌಸ್‌ನತ್ತ ತಿರುಗಿದ. ಆ ಹೆಣ್ಣನ್ನು ಅವನು ಸರಿಯಾಗಿ ಗಮನಿಸಿದ್ದ. ಈ ಹಿಂದೆ ಭುಜಂಗೇಶರಾಯರ ಮನೆಗೆ ಬಂದಾಗ ಒಂದೆರಡು ಬಾರಿ ಕಂಡಿದ್ದ, ಮಾತಾಡಿಯೂ ಇದ್ದ. ಅವರ ಹಿರಿ ಮಗಳು ಮೇನಕಾ!

ಫಾರ್ಮ್ ಹೌಸ್‌ಗೆ ತಾನೇ ಖುದ್ದಾಗಿ ಬರುವ ಜರೂರತ್ತೇನು? ಜೊತೆಗೆ ಕೆಲಸದಾಳು! ಏನಾದರೂ ಕೆಲಸ ಮಾಡಿಸಲು ಬಂದಿದ್ದರೂ, ಕಾಲುದಾರಿಯನ್ನು ಬಿಟ್ಟು ಕಬ್ಬಿನ ತೋಟದ ಮರೆಯಿಂದ ಬರಲು ಕಾರಣವೇನು? ತಾವು ಇಲ್ಲಿಗೆ ಬಂದಿರುವ ಸುದ್ದಿ ಯಾರಿಗೂ ತಿಳಿಯಬಾರದೆಂದೇ?

ಪಿಸಿ ಸಾರಂಗನನ್ನು ಅಲ್ಲಿಯೇ ನಿಲ್ಲಿಸಿ, ತಾನೊಬ್ಬನೆ ಫಾರ್ಮ್ ಹೌಸ್‌ನತ್ತ ನಡೆದ ರಾಜಧಾನಿಯನ್ನು ಕಂಡು ಪಿಸಿಗೆ ಮೈ ಉರಿಸಿತು. ಅಧಿಕಾರಿ ಸುಮ್ಮನೆ ತನ್ನನ್ನು ದೂರವಿಟ್ಟಿದ್ದಾನೆ. ಏನನ್ನೋ ವಿಚಾರಿಸಲು ಹೊರಟಿದ್ದಾನೆ! ಯಾವ ರಹಸ್ಯವಿದೆ ಒಳಗೆ? ಮೈಪರಚಿಕೊಂಡ ಸಾರಂಗ ಇನ್ಸ್‌ಪೆಕ್ಟರ್‌ನನ್ನು ಮನಸ್ಸಿನಲ್ಲಿಯೇ ಬೈದ.

ಇನ್ಸ್‌ಪೆಕ್ಟರ್ ರಾಜಧಾನಿ ಫಾರ್ಮ್ ಹೌಸ್‌ನ ಮುಂದೆ ನಿಂತು ತೆರೆದ ಬಾಗಿಲನ್ನು ಮೆತ್ತಗೆ ಕುಟ್ಟಿ ಒಳಗಿದ್ದವರನ್ನು ಎಚ್ಚರಿಸಿದ.

ತಕ್ಷಣವೇ ಒಳಗಿನಿಂದ ಮಾತು ನಿಂತಿತು!